# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು

ಸಂಖ್ಯೆ/ಕರಾಸಾ/ಕೇಕ/ವಶಾ/ಸಾಮಾನ್ಯ/ 516 /2019-2020 ದಿನಾಂಕ : 22/2/2020

## ಸುತ್ತೋಲೆ

ವಿಷಯ : ಅಧಿಕಾರಿ/ಸಿಬ್ಬಂದಿ ವೃಂದಗಳ ಜ್ಯೇಷ್ಠತಾ ಪಟ್ಟಿಗಳನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಕುರಿತು.

* * * * * *

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011ರ ಪ್ರಕರಣಕ್ಕೆ ಸಂಬಂಧಿಸಿದ ಎಂ.ಎ ಸಂಖ್ಯೆ: 1151/2018 ರಲ್ಲಿ ದಿನಾಂಕ: 10/05/2019 ರಂದು ನೀಡಿರುವ ತೀರ್ಮ ಹಾಗೂ ಕರ್ನಾಟಕ ಸರ್ಕಾರದ ನಡವಳಿ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018 ದಿನಾಂಕ: 15/05/2019 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಸಿದ್ಧಪಡಿಸಿದ ಅಧಿಕಾರಿ/ಸಿಬ್ಬಂದಿ ವೃಂದಗಳ ದಿನಾಂಕ:27/04/1978 ರಿಂದ 31/12/2018 ರವರೆಗಿನ ಅವಧಿಗೆ ಪರಿಷ್ಕೃತ ಪ್ರಾವಿಷನಲ್ ಮತ್ತು ಪರಿಷ್ಕೃತ ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ಈ ಹಿಂದೆ ನಿಗಮದ ಅಧಿಕೃತ ವೆಬ್‌ಸೈಟ್ **www.ksrtc.in** ನಲ್ಲಿ ಪ್ರಕಟಿಸಲಾಗಿತ್ತು.

ಪ್ರಸ್ತುತ ದಿನಾಂಕ:01/01/2019 ರಿಂದ 31/12/2019 ರವರೆಗಿನ ಅವಧಿಯನ್ನು ಒಳಗೊಂಡಂತೆ ದಿನಾಂಕ:01/01/2020 ರಂದು ಇರುವಂತೆ ಅಧಿಕಾರಿ/ಸಿಬ್ಬಂದಿ ವೃಂದಗಳ ಜ್ಯೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಅವುಗಳನ್ನು ಸಿದ್ಧಪಡಿಸಿ ಹಂತ-ಹಂತವಾಗಿ ನಿಗಮದ ಅಧಿಕೃತ ವೆಬ್‌ಸೈಟ್ **www.ksrtc.in** ನಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ, 4 ಸಾರಿಗೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ಮೇಲ್ವಿಚಾರಕ/ರಾಜ್ಯಮಟ್ಟದ ಮೇಲ್ವಿಚಾರಕೇತರ ವೃಂದಗಳ ಸಿಬ್ಬಂದಿಗಳು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಜ್ಯೇಷ್ಠತಾ ಪಟ್ಟಿಗಳನ್ನು ಸಕಾಲದಲ್ಲಿ ಗಮನಿಸುವಂತೆ ಹಾಗೂ ಪ್ರಾವಿಷನಲ್ ಜ್ಯೇಷ್ಠತಾ ಪಟ್ಟಿಯಲ್ಲಿ ನಮೂದಿಸಿರುವ ಸೇವಾ ವಿವರ, ಜ್ಯೇಷ್ಠತಾ ಸ್ಥಾನ ಸ್ಥಿತಿ ಮತ್ತು ಜ್ಯೇಷ್ಠತೆಗೆ ಸಂಬಂಧಿಸಿದ ಇತರೆ ಅಂಶಗಳ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ಆಕ್ಷೇಪಣೆಗಳನ್ನು ಸಮರ್ಥಿಸುವಂಥಹ ದೃಢೀಕೃತ ದಾಖಲೆಗಳೊಂದಿಗೆ ಪ್ರಾವಿಷನಲ್ ಜ್ಯೇಷ್ಠತಾ ಪಟ್ಟಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು(ಸಿಬ್ಬಂದಿ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ವರಿಷ್ಠತಾ ಶಾಖೆ, ಬೆಂಗಳೂರು ರವರಿಗೆ ತಲುಪುವಂತೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ನಿಗದಿತ ಅವಧಿಯ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ಸಹ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಮುಂದುವರೆದು, ಜ್ಯೇಷ್ಠತಾ ಪಟ್ಟಿಗಳನ್ನು ನಿಗಮದ ಅಂತರ್‌ಜಾಲತಾಣದಲ್ಲಿ ಪ್ರಕಟಿಸುತ್ತಿರುವುದರಿಂದ, ವೈಯಕ್ತಿಕವಾಗಿ ಉದ್ಯೋಗಿಗಳಿಗೆ ಜಾರಿಗೊಳಿಸಲಾಗುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಸದರಿ ಸುತ್ತೋಲೆಯನ್ನು ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಗಮನಕ್ಕೆ ತರುವಂತೆ ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು (ಸಿಬ್ಬಂದಿ : ಪರಿಸರ)

**ಪ್ರತಿಯನ್ನು ವಂದನಾಪೂರ್ವಕವಾಗಿ :**

1. ಅಧ್ಯಕ್ಷರು/ಉಪಾಧ್ಯಕ್ಷರು, ಕ.ರಾ.ರ.ಸಾ.ನಿಗಮ, ರವರ ಆಪ್ತ ಕಾರ್ಯದರ್ಶಿರವರಿಗೆ
2. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿಗಮ/ಬೆಂ.ಮ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ/ಈ.ಕ.ರ.ಸಾ.ಸಂಸ್ಥೆ ರವರಿಗೆ
3. ನಿರ್ದೇಶಕರು (ಸಿ:ಪ)/ ನಿರ್ದೇಶಕರು (ಭಜಾ), ಕ.ರಾ.ರ.ಸಾ.ನಿಗಮ ರವರಿಗೆ

**ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ವಿಭಾಗೀಯ ಮುಖ್ಯಸ್ಥರುಗಳು, ಕ.ರಾ.ರ.ಸಾ.ನಿಗಮ ರವರುಗಳಿಗೆ
2. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ/ಈ.ಕ.ರ.ಸಾ.ಸಂಸ್ಥೆ ರವರಿಗೆ
3. ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು.
4. ಮುಖ್ಯ ಗಣಕ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.